# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/740/2018-19

ದಿನಾಂಕ 08-07-2019

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 07-06-2019ರಂದು ನಡೆದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ 07-06-2019ರಂದು ಬೆಳಿಗ್ಗೆ 11-00 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ. ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ. ಆದುದರಿಂದ. ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 27-07-2019ರ ಒಳಗಾಗಿ, ವಿಶೇಷಾಧಿಕಾರಿಗಳು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570 005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

ವಿಶೇಷಾಧಿಕಾರಿ(ಪ್ರಾಧಿಕಾರ)

ಪ್ರತಿ:

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

**AC Forwarding letter**

## ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ: 07.06.2019 ರಂದು ಪೂರ್ವಾಹ್ನ 11–00 ಗಂಟೆಗೆ ಜರುಗಿದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಗೆ ಹಾಜರಾದ ಸದಸ್ಯರುಗಳು**

1. ಪ್ರೊ. ಜಿ.ಹೇಮಂತಕುಮಾರ್, ಕುಲಪತಿಗಳು ... ಅಧ್ಯಕ್ಷರು
2. ಶ್ರೀ ಅಪ್ಪಾಜಿಗೌಡ, ಎಂ.ಎಲ್.ಸಿ ... ಸದಸ್ಯರು
3. ಶ್ರೀ ಶಾಂತಕುಮಾರ್ ಕೆ ... ಸದಸ್ಯರು
4. ಶ್ರೀ ಜಿ. ಅಶ್ವತ್ಥ್ ನಾರಾಯಣ ... ಸದಸ್ಯರು
5. ಡಾ. ಪಿ.ಎಸ್. ಸುರೇಶ್ ... ಸದಸ್ಯರು
6. ಡಾ. ಎಂ. ಪ್ರೀತಿ ... ಸದಸ್ಯರು
7. ಡಾ. ರಾಜಗೋಪಾಲ್ ... ಸದಸ್ಯರು
8. ಡಾ. ಕೆ.ಕೆ. ವಿಶಾಲಾಕ್ಷಿ ... ಸದಸ್ಯರು
9. ಪ್ರೊ. ಎನ್.ಎಂ. ತಳವಾರ್ ... ಸದಸ್ಯರು
10. ಪ್ರೊ. ಜಿ. ನಾಗೇಂದ್ರಪ್ಪ ... ಸದಸ್ಯರು
11. ಪ್ರೊ. ಡಿ. ಆನಂದ್ ... ಸದಸ್ಯರು
12. ಪ್ರೊ. ಶಿವಬಸವಯ್ಯ ... ಸದಸ್ಯರು
13. ಪ್ರೊ. ಬಿ.ಎಸ್.ವಿಶ್ವನಾಥ್ ... ಸದಸ್ಯರು
14. ಡಾ. ಎಸ್. ಮದಿಅಳಗನ್ ... ಸದಸ್ಯರು
15. ಶ್ರೀ ರಘು ಸಿ.ಎಸ್ ... ಸದಸ್ಯರು
16. ಶ್ರೀ ಬೆಳವಾಡಿ ಪ್ರಭಾಕರ್ ... ಸದಸ್ಯರು
17. ಡಾ. ಪಿ. ಸರಸ್ವತಿ, ಗ್ರಂಥಪಾಲಕರು ... ಸದಸ್ಯರು
18. ಪ್ರೊ. ಸಿ. ರಾಮಸ್ವಾಮಿ, ವಿದ್ಯಾರ್ಥಿ ಕ್ಷೇಮಪಾಲನ ... ಸದಸ್ಯರು
19. ಪ್ರೊ. ಎನ್.ಕೆ. ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ. ... ಸದಸ್ಯರು
20. ಡಾ. ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ... ಸದಸ್ಯರು
21. ಡಾ. ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ... ಸದಸ್ಯರು
22. ಪ್ರೊ. ಕೆ.ಎಂ.ಮಹದೇವನ್, ಕುಲಸಚಿವ(ಪರೀಕ್ಷಾಂಗ) ... ಸದಸ್ಯರು
23. ಪ್ರೊ. ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು ... ಸದಸ್ಯರು
24. ಪ್ರೊ. ಲಿಂಗರಾಜ ಗಾಂಧಿ, ಕುಲಸಚಿವರು ... ಸದಸ್ಯರು ಕಾರ್ಯದರ್ಶಿಗಳು

**ವಿಶೇಷ ಆಹ್ವಾನಿತರು**

25. ಪ್ರೊ. ಮಹದೇವ, ಡೀನರು, ಕಲಾನಿಕಾಯ
26. ಪ್ರೊ. ಸಿ.ಬಸವರಾಜು, ಡೀನರು, ಕಾನೂನು ನಿಕಾಯ
27. ಪ್ರೊ. ಸದಾನಂದ ಯಮಕನಮರಡಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ

**ಸಭೆಗೆ ಹಾಜರಾಗದವರು**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ
3. ಶ್ರೀ ಕೆ.ಟಿ. ಶ್ರೀಕಂಠೇಗೌಡ ಎಂ.ಎಲ್.ಸಿ
4. ಶ್ರೀಮತಿ ಎಂ.ಎನ್. ಪೊನ್ನಮ್ಮ
5. ಶ್ರೀ ಕುಮಾರ್
6. ಡಾ. ವಿ. ಶಿವಪ್ರಸಾದ್
7. ಶ್ರೀ ಜಿ.ಯು. ಚನ್ನಬಸಪ್ಪ
8. ಪ್ರೊ. ಹೆಚ್.ಟಿ. ಬಸವರಾಜಪ್ಪ
9. ಶ್ರೀ ನಾಗೇಶ್ ಕರಿಯಪ್ಪ

ಮಾನ್ಯ ಕುಲಪತಿಗಳು ಶಿಕ್ಷಣ ಮಂಡಳಿಯ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ಶಿಕ್ಷಣ ಮಂಡಳಿಗೆ ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿ, ಅವರನ್ನೂ ಸಹ ಸಭೆಗೆ ಸ್ವಾಗತಿಸಲಾಯಿತು.

1. ಪ್ರೊ.ಬಿ.ಎಸ್.ವಿಶ್ವನಾಥ್, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
2. ಪ್ರೊ.ಎನ್.ಕೆ.ಲೋಕನಾಥ್, ನಿರ್ದೇಶಕರು, ಯೋಜನೆ ಮತ್ತು ಉಸ್ತುವಾರಿ ಮೌಲ್ಯಮಾಪನ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಡಾ.ಕೆ.ಕೆ.ವಿಶಾಲಾಕ್ಷಿ, ಪ್ರಾಂಶುಪಾಲರು, ಶ್ರೀ ಕಾಗಿನೆಲೆ ಮಹಾಸಂಸ್ಥಾನ, ಕನಕ ಗುರುಪೀಠ ಕಾಲೇಜ್ ಆಫ್ ಎಜುಕೇಷನ್, ಕುವೆಂಪುನಗರ, ಮೈಸೂರು. .

ಇದುವರೆಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವವರ ಸೇವೆಯನ್ನು ಸ್ಮರಿಸಿ ಕಡತದಲ್ಲಿ ದಾಖಲಿಸಲಾಯಿತು.

1. ಪ್ರೊ.ಎಸ್.ಎಲ್, ಬೆಳಗಲಿ, ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
2. ಪ್ರೊ. ಯಶವಂತ್ ಡೋಂಗ್ರೆ, ನಿರ್ದೇಶಕರು, ಯೋಜನೆ ಮತ್ತು ಉಸ್ತುವಾರಿ ಮೌಲ್ಯಮಾಪನ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಡಾ.ಎಂಸಿ.ನಟರಾಜು, ಪ್ರಾಂಶುಪಾಲರು, ಜೆ.ಎಸ್.ಎಸ್.ಶಿಕ್ಷಣ ಸಂಸ್ಥೆ, ಸುತ್ತೂರು ಇವರ ಸೇವೆಯನ್ನು ಸ್ಮರಿಸಿದರು.

**ನಂತರ ಕುಲಸಚಿವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.**

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ | |
|---|---|---|
| I | <u>ಹಿಂದಿನ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.</u> | |
| | I.I | ದಿನಾಂಕ 14-03-2019ರಂದು ಜರುಗಿದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| | | ಪ್ರೊ ಜಿ. ನಾಗೇಂದ್ರಪ್ಪ ಮತ್ತು ಪ್ರೊ ಎಸ್.ಎಲ್.ಬೆಳಗಲಿ, ಶಿಕ್ಷಣ ಮಂಡಳಿ ಸದಸ್ಯರು ಇವರು ಕ್ರಮವಾಗಿ ದಿನಾಂಕ 16-4-2019ರಂದು ಮತ್ತು ದಿನಾಂಕ 5-4-2019ರಂದು ಆಕ್ಷೇಪಣೆ ವ್ಯಕ್ತಪಡಿಸಿ ಬರೆದ ಪತ್ರಗಳ ಸಾರಾಂಶವನ್ನು ದಿನಾಂಕ 7-6-2019ರಂದು ನಡೆದ ಶಿಕ್ಷಣ ಸಭೆಯ ಗಮನಕ್ಕೆ ತರಲಾಯಿತು. |
| | ತೀರ್ಮಾನ | II.1 ಕ್ಕೆ ಸಂಬಂಧಿಸಿದಂತೆ,<br>Prof. G. Nagendrappa mentioned about the discontinuation of B.Ed programme submitted by Rama Krishna Ashram, Mysore and requested the University to be considerate on the Ashrams academic problems and requested to continue the course in the best interest of quality and moral education.<br><br>II.2ಕ್ಕೆ ಸಂಬಂಧಿಸಿದಂತೆ,<br>Prof. S.L Belagali expressed his concern with regard to violation of Ph.D. regulations and opined that some of the Research Centres have not been adhered to Ph.D. Rules and Regulations regarding conduct of course work. He cited the example of two cases of violations of Ph.D. regulations in his own Department. The VC assured that the Chairman of BOS would be asked to look into the issue.<br><br>Prof. Nagendrappa endorsed the views expressed by Prof. Belagali and further added that there were instances where two BOS members opposed to accord permission for recognizing guide of one of the approved Research Centres of the University and requested the University to prevent recurrence of such cases in future.<br><br>II.3ಕ್ಕೆ ಸಂಬಂಧಿಸಿದಂತೆ,<br>Prof. Nagendrappa appealed to accept to increase the GER as directed by the Government of Karnataka and also requested the University to constitute |

| | | |
|---|---|---|
| | | a Committee headed by the Vice-Chancellor to frame modalities to implement the same.<br>**ಮೇಲಿನ ತಿದ್ದುಪಡಿಗಳೊಂದಿಗೆ ದಿನಾಂಕ 14-3-2019 ಶಿಕ್ಷಣ ಮಂಡಳಿ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.** |
| | I.II | ದಿನಾಂಕ 17-03-2019ರಂದು 99ನೇ ವಾರ್ಷಿಕ ಘಟಿಕೋತ್ಸವದ ಪೂರ್ವಾಭಾವಿಯಾಗಿ ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| | **ತೀರ್ಮಾನ:** | ದೃಢೀಕರಿಸಲಾಯಿತು. |
| II | **<u>ಸಿಂಡಿಕೇಟ್ ಅಥವಾ ಕುಲಪತಿಗಳು ಮಂಡಿಸಿರುವ ವಿಷಯಗಳು</u>** | |
| | II.1 | ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಮತ್ತು ವಯೋಮಿತಿಯಲ್ಲಿ ಮೀಸಲಾತಿ/ರಿಯಾಯಿತಿ ಕಲ್ಪಿಸುವ ಬಗ್ಗೆ. |
| | **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರಕಾರಿ ಹಾಗೂ ಸರಕಾರಿ ಅನುದಾನಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಶ್ವವಿದ್ಯಾನಿಲಯದ ನಿಯಂತ್ರಣದೊಳಗೆ ಬರುವಂತಹ ಕೋರ್ಸ್‌ಗಳಿಗೆ ಅನ್ವಯಿಸುವಂತೆ (NCTE, AICTE, COA, BCI ಇಂತಹ ಇತರೆ ಶಾಸನಬದ್ಧ ಸಂಸ್ಥೆಗಳ ಕೋರ್ಸ್‌ಗಳನ್ನು ಹೊರತುಪಡಿಸಿ) ವಿಶೇಷ ಚೇತನರಿಗೆ ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಸಂಖ್ಯಾಮಿತಿ ಹೊರತುಪಡಿಸಿ ಕನಿಷ್ಠ 5 ಸೀಟುಗಳನ್ನು ಹಾಗೂ ಪ್ರವೇಶ ವಯೋಮಿತಿಯನ್ನು 5 ವರ್ಷಗಳವರೆಗೆ ವಿಸ್ತರಿಸುವುದರೊಂದಿಗೆ ವಿನಾಯಿತಿ ನೀಡಲು ಒಪ್ಪಲಾಯಿತು. |
| | II.2 | ಸ್ನಾತಕ ವಿನಿಯಮಾವಳಿ 2004 ನಿಯಮ 17ರಲ್ಲಿನ ಅವಕಾಶದ ಬಗ್ಗೆ. |
| | **ತೀರ್ಮಾನ:** | ಕು. ಫರ್‌ಹೀನ್, ಸೆಂಟ್ ಫಿಲೋಮಿನಾಸ್ ಮಹಿಳಾ ಕಾಲೇಜು, ಹಾಸನ ಇವರು 2012-13ನೇ ಸಾಲಿನಲ್ಲಿ ಪ್ರವೇಶ ಪಡೆದಿದ್ದು 01 ರಿಂದ 05ನೇ ಸೆಮಿಸ್ಟರ್‌ವರೆಗಿನ ವ್ಯಾಸಂಗವನ್ನು ಉತ್ತಮ ಅಂಕಗಳನ್ನು ಪಡೆದು ಯಶಸ್ವಿಯಾಗಿ ಪೂರೈಸಿ ಕಾರಣಾಂತರಗಳಿಂದ 06ನೇ ಸೆಮಿಸ್ಟರ್‌ಗೆ ಹಾಜರಾಗದಿರುವುದರಿಂದ UG-Regulations 2004ರ ಪ್ರಕರಣ 17ರಂತೆ One time opportunity ಎಂದು ಪರಿಗಣಿಸಿ ಪರೀಕ್ಷೆ ಬರೆಯಲು ಮಾನ್ಯ ಕುಲಪತಿಗಳು ಅವಕಾಶ ಕಲ್ಪಿಸಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಸಮರ್ಥಿಸಿತು.<br>ಅದೇ ರೀತಿಯ ಪ್ರಕರಣದಲ್ಲಿನ ಕು. ಚಂದ್ರಿಕ ಆರ್, ವಿದ್ಯಾವರ್ಧಕ ಕಾಲೇಜು ಮೈಸೂರು ಇವರಿಗೂ ಅನುಮತಿ ಕೋರಿ ಮನವಿ ಸಲ್ಲಿಸಿರುವುದನ್ನು ಪರಿಗಣಿಸಿದ ಸಭೆಯು 06ನೇ ಸೆಮಿಸ್ಟರ್ ಪರೀಕ್ಷೆ ಬರೆಯುವ ಸಲುವಾಗಿ ಅವಕಾಶ ನೀಡಲು ತೀರ್ಮಾನಿಸಿತು. |
| | II.3 | ಸ್ನಾತಕ ವಿನಿಯಮಾವಳಿ 2004-05 ನಿಯಮ 17ರಲ್ಲಿನ ಅವಕಾಶದ ಬಗ್ಗೆ. |
| | **ತೀರ್ಮಾನ:** | ಕು. ಗಿರಿದರ್ಶಿನಿ, ಜೆ.ಎಸ್.ಎಸ್. ಮಹಿಳಾ ಕಾಲೇಜು(ಸ್ವಾಯತ್ತ), ಸರಸ್ವತಿಪುರಂ, ಮೈಸೂರು ಇವರು ಕೋರ್ಸಿಗೆ ಪ್ರವೇಶ ಪಡೆದು 2012-13ನೇ ಸಾಲಿನಲ್ಲಿ ವ್ಯಾಸಂಗ ಪೂರೈಸಿದ್ದು ಪ್ರಥಮ ಸೆಮಿಸ್ಟರಿನ ಗಣಿತಶಾಸ್ತ್ರ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿ ನಂತರ ಕಾರಣಾಂತರಗಳಿಂದ ಪರೀಕ್ಷೆ ತೆಗೆದುಕೊಳ್ಳಲಾಗಿರುವುದಿಲ್ಲವೆಂದು ತಿಳಿಸಿ ಮರು ಪರೀಕ್ಷೆ ಬರೆಯಲು ಅನುಮತಿ ಕೋರಿ ಮನವಿ ಸಲ್ಲಿಸಿರುವುದನ್ನು ಸಭೆಯು ಗಮನಿಸಿ, ಈ ವಿದ್ಯಾರ್ಥಿಗೂ ಸಹ One time opportunity ಎಂದು ಪರಿಗಣಿಸಿ, UG-Regulations 2004ರ ಪ್ರಕರಣ 17ರಂತೆ ಪರೀಕ್ಷೆ ಬರೆಯುವ ಸಲುವಾಗಿ ಅನುಮತಿ ನೀಡಲು ಶಿಕ್ಷಣ ಮಂಡಳಿ ಸಭೆಯು ತೀರ್ಮಾನಿಸಿತು. |
| | II.4 | ಪಿಹೆಚ್.ಡಿ. ನಿಯಮಾವಳಿ 2017ರ ತಿದ್ದುಪಡಿಯ ಬಗ್ಗೆ. |
| | **ತೀರ್ಮಾನ** | ಪಿಹೆಚ್.ಡಿ. ನಿಯಮಾವಳಿ-2017ಕ್ಕೆ ತಿದ್ದುಪಡಿಗಳನ್ನು ಮಾಡುವ ಬಗೆಗೆ ರಚಿಸಲಾಗಿದ್ದ ಸಮಿತಿಯು ಪಿಹೆಚ್.ಡಿ. ನಿಯಮಾವಳಿಗೆ ಕೆಲವು ತಿದ್ದುಪಡಿಗಳನ್ನು ಸೂಚಿಸಿ ಶಿಫಾರಸ್ಸು ಮಾಡಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅಂಗೀಕರಿಸಿತು.<br>ಮತ್ತು ಸಮಯ ವ್ಯರ್ಥವಾಗುವುದನ್ನು ತಪ್ಪಿಸುವ ಸಲುವಾಗಿ ಕೋರ್ಸ್ ವರ್ಕ್‌ನಲ್ಲಿ ಅನುತ್ತೀರ್ಣರಾಗುವ ಅಭ್ಯರ್ಥಿಗಳು ಮತ್ತೊಮ್ಮೆ ಒಂದೆರಡು ತಿಂಗಳೊಳಗೆ ಕೋರ್ಸ್ ವರ್ಕ್ ಪರೀಕ್ಷೆ ಬರೆದು ಪಿಹೆಚ್.ಡಿ. ಮಾಡಲು ಅನುವಾಗುವಂತೆ ಅವಕಾಶ ಕಲ್ಪಿಸಲು ಸಭೆಯು ತೀರ್ಮಾನಿಸಿತು. |

| | | |
|---|---|---|
| | II.5 | ವಿದ್ಯಾರ್ಥಿಗಳ ಶುಲ್ಕ ಮರುಭರಿಕೆ ಸಂಬಂಧ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಅಧಿಸೂಚನೆ ಬಗ್ಗೆ. |
| | **ತೀರ್ಮಾನ:** | ವಿದ್ಯಾರ್ಥಿಗಳ ಶುಲ್ಕ ಮರುಭರಿಕೆ ಸಂಬಂಧ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಅಕ್ಟೋಬರ್ 2018ರಲ್ಲಿ ಹೊರಡಿಸಿರುವ ಅಧಿಸೂಚನೆಯಂತೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಎಲ್ಲಾ ಅಧ್ಯಯನ ವಿಭಾಗಗಳು ಮತ್ತು ಕಾಲೇಜುಗಳಲ್ಲೂ ಅಳವಡಿಸಿಕೊಳ್ಳಲು ಶಿಕ್ಷಣ ಮಂಡಳಿ ಸಭೆಯು ತೀರ್ಮಾನಿಸಿತು. |
| | II.6 | ಮೈಸೂರು ವಿಶ್ವವಿದ್ಯಾನಿಲಯದ ಅಧೀನಕೊಳಪಟ್ಟ ಕಾಲೇಜುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆಯುವ ಎಲ್ಲಾ ವಿದ್ಯಾರ್ಥಿನಿಯರಿಗೆ ಪೂರ್ಣ ಶುಲ್ಕ ವಿನಾಯಿತಿ ನೀಡುವ ಬಗ್ಗೆ. |
| | **ತೀರ್ಮಾನ:** | 2019–20ನೇ ಸಾಲಿನಿಂದ ಪದವಿ ಕೋರ್ಸುಗಳಿಗೆ ರೂ. 3,500/– ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ರೂ. 5,500/–ಗಳ ಶುಲ್ಕವನ್ನು ವಿದ್ಯಾರ್ಥಿನಿಯರಿಗೆ ಸರ್ಕಾರವು ಪಾವತಿಸಲಿದ್ದು ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ / ಅಧ್ಯಯನ ವಿಭಾಗಗಳಲ್ಲಿ / ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಪ್ರವೇಶ ಪಡೆಯುವ ಹೆಣ್ಣು ಮಕ್ಕಳಿಂದ ಪ್ರವೇಶಾತಿ ಸಮಯದಲ್ಲಿ ನಿಗಧಿತ ಶುಲ್ಕವನ್ನು ಪಾವತಿಸಿಕೊಂಡು ಆನಂತರ ಅಂತಹ ವಿದ್ಯಾರ್ಥಿಗಳು ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳಲು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| | II.7 | 2019–20ನೇ ಸಾಲಿನ ಆಯವ್ಯಯ ಅಂದಾಜುಗಳು |
| | | 2019–20ನೇ ಸಾಲಿನ ಆಯವ್ಯಯ ಅಂದಾಜುಗಳ ಸಂಕ್ಷಿಪ್ತ ವರದಿಯನ್ನು ಕುಲಸಚಿವರು ಓದುವುದರ ಮೂಲಕ ಸಭೆಯಲ್ಲಿ ಮಂಡಿಸಿದರು.<br><br>2019–20ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಸುಮಾರು 3.00 ಕೋಟಿ ರೂಪಾಯಿಗಳ ಕೊರತೆ ಬಜೆಟ್ ಮಂಡಿಸಲಾಗಿದೆ ಎಂದು ಕುಲಪತಿಯವರು ತಿಳಿಸಿದರು.<br><br>RUSA ಯೋಜನೆಯಡಿ ಬಿಡುಗಡೆಯಾಗಿರುವ 7.50 ಕೋಟಿ ರೂಪಾಯಿಗಳನ್ನು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕೆಲಸಗಳಿಗೆ ಬಳಕೆ ಮಾಡಲಾಗುವುದು ಎಂದು ತಿಳಿಸಿದರು. ಈ ವಿಷಯವನ್ನು ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ವಿಭಾಗಗಳ ಗಮನಕ್ಕೆ ತಂದು ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿ ತಾತ್ವಿಕವಾಗಿ ಒಪ್ಪಿಗೆ ಪಡೆದು ಆಯಾ ವಿಭಾಗಗಳ ಅಭಿವೃದ್ಧಿ ಕಾರ್ಯಗಳಿಗೆ ಈ ಅನುದಾನವನ್ನು ಬಳಸಲಾಗುವುದು ಎಂದು ಕುಲಸಚಿವರು ತಿಳಿಸಿದರು. |
| | **ತೀರ್ಮಾನ:** | 2019–20ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| | II.8 | ವಿಶ್ವವಿದ್ಯಾನಿಲಯದಲ್ಲಿರುವ ವಿದ್ಯಾರ್ಥಿ ಕ್ಷೇಮ ನಿಧಿ ಖಾತೆಯನ್ನು ದಿನಾಂಕ 31–03–2019ಕ್ಕೆ ಮುಕ್ತಾಯಗೊಳಿಸಿ ಜಿ.ಆರ್.ಎ. ಖಾತೆಯಲ್ಲಿರುವ ವಿದ್ಯಾರ್ಥಿ ಕ್ಷೇಮಪಾಲನಾ ಚಟುವಟಿಕೆಗಳಿಗೆ ಸೇರ್ಪಡಿಸುವುದರ ಬಗ್ಗೆ. |
| | | ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಮಾತನಾಡಿ ಆಯವ್ಯಯ ಶೀರ್ಷಿಕೆ ಸಂಖ್ಯೆ 232, 234, 293, 299 ಶೀರ್ಷಿಕೆಗಳನ್ನು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ಶೀರ್ಷಿಕೆಗಳಿಗೆ ವರ್ಗಾವಣೆ ಮಾಡಿದ್ದು ಇದರಿಂದ ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗಕ್ಕೆ ಹಣ ಕಡಿಮೆಯಾದಲ್ಲಿ ಬೇರೆ ಯಾವುದಾದರೂ ಶೀರ್ಷಿಕೆಗಳಿಂದ ಹಣವನ್ನು ಹೊಂದಾಣಿಕೆ ಮಾಡಲು ಕೋರಿದರು. |

| | | |
|---|---|---|
| | | ಮಾನ್ಯ ಕುಲಪತಿಯವರು ಅವಶ್ಯವಿದ್ದಲ್ಲಿ ಹೊಂದಾಣಿಕೆ ಮಾಡಲಾಗುವುದೆಂದು ತಿಳಿಸಿದರು. |
| | **ತೀರ್ಮಾನ:** | 2018–19ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಹಲವಾರು ಕಾರ್ಯಕ್ರಮಗಳ ಹಾಗೂ ಚಟುವಟಿಕೆಗಳಿಗಾಗಿ ವೆಚ್ಚಮಾಡಿರುವುದನ್ನು ಭರಿಸುವ ಉದ್ದೇಶದಿಂದ ವಿಶ್ವವಿದ್ಯಾನಿಲಯದಲ್ಲಿರುವ ವಿದ್ಯಾರ್ಥಿ ಕ್ಷೇಮ ನಿಧಿ ಖಾತೆಯನ್ನು ದಿನಾಂಕ 31–03–2019ಕ್ಕೆ ಮುಕ್ತಾಯಗೊಳಿಸಿ ಜಿ.ಆರ್.ಎ. ಖಾತೆಗೆ ಸೇರ್ಪಡೆ ಮಾಡಿಕೊಂಡಿರುವುದಕ್ಕೆ ಹಾಗೂ ಆಯವ್ಯಯದಲ್ಲಿ ನಿಗಧಿಪಡಿಸಿರುವ ವಿದ್ಯಾರ್ಥಿ ಕ್ಷೇಮಪಾಲನಾ ಚಟುವಟಿಕೆಗಳಿಗೆ ವಿನಿಯೋಗಿಸಿಕೊಳ್ಳುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| | II.9 | 2018–19ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಮರುಹೊಂದಾಣಿಕೆ (Re-appropriation) ಬಗ್ಗೆ. |
| | **ತೀರ್ಮಾನ:** | 2018–19ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ವರ್ಷಾಂತ್ಯದಲ್ಲಿ ಉಳಿತಾಯವಾಗಬಹುದಾದ ಇತರೆ ಶೀರ್ಷಿಕೆಗಳ ಮೊತ್ತಗಳಿಂದ ಮರುಹೊಂದಾಣಿಕೆ ಮಾಡಿಕೊಳ್ಳುವುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| | II.10 | 2018–19ನೇ ಸಾಲಿನ ಆಯವ್ಯಯ ಅಂದಾಜು ವೆಚ್ಚ ಶೀರ್ಷಿಕೆಗಳಲ್ಲಿ ಪುನರ್ ವಿನಿಯೋಗಗೊಳಿಸಿರುವ ಬಗ್ಗೆ. |
| | | ಹಣಕಾಸು ಅಧಿಕಾರಿಗಳು ಮಾತನಾಡಿ 2018–19ನೇ ಸಾಲಿನ ಆಯವ್ಯಯ ಅಂದಾಜು ವೆಚ್ಚ ಶೀರ್ಷಿಕೆಗಳಲ್ಲಿ ಪುನರ್ ವಿನಿಯೋಗಗೊಳಿಸಿರುವ ಬಗ್ಗೆ ತಯಾರಿಸಲಾದ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸಿದರು. |
| | **ತೀರ್ಮಾನ:** | 2018–19ನೇ ಸಾಲಿನ ಆಯವ್ಯಯ ಅಂದಾಜು ವೆಚ್ಚ ಶೀರ್ಷಿಕೆಗಳಲ್ಲಿ ಪುನರ್ ವಿನಿಯೋಗಗೊಳಿಸಿರುವುದನ್ನು ಸಭೆಯು ಅನುಮೋದಿಸಿತು. |
| | II.11 | ಮಹಾಜನ ಪ್ರಥಮ ದರ್ಜೆ ಕಾಲೇಜು, ಇಲ್ಲಿನ ವಿದ್ಯಾರ್ಥಿಯಾದ ಶ್ರೀ ಜೋನಾಥನ್ ಪೊನ್ನಪ್ಪ – ಇವರಿಗೆ ಕಲಿಕಾ ನ್ಯೂನತೆ ಇರುವುದರಿಂದ ಎರಡನೇ ಭಾಷಾ ವಿಷಯವನ್ನು ಅಧ್ಯಯನ ಮತ್ತು ಪರೀಕ್ಷೆ ತೆಗೆದುಕೊಳ್ಳುವುದರಿಂದ ವಿನಾಯಿತಿಯನ್ನು 2008–11ನೇ ಸಾಲಿನಿಂದಲೇ ಪೂರ್ವಾನ್ವಯವಾಗುವಂತೆ ಅನುಮತಿ ನೀಡಿರುವ ಬಗ್ಗೆ. |
| | **ತೀರ್ಮಾನ:** | ಮಹಾಜನ ಪ್ರಥಮ ದರ್ಜೆ ಕಾಲೇಜು, ಇಲ್ಲಿನ ವಿದ್ಯಾರ್ಥಿಯಾದ ಶ್ರೀ ಜೋನಾಥನ್ ಪೊನ್ನಪ್ಪ – ಇವರಿಗೆ ಕಲಿಕಾ ನ್ಯೂನತೆ ಇರುವುದರಿಂದ ಎರಡನೇ ಭಾಷಾ ವಿಷಯವನ್ನು ಅಧ್ಯಯನ ಮತ್ತು ಪರೀಕ್ಷೆ ತೆಗೆದುಕೊಳ್ಳುವುದರಿಂದ ವಿನಾಯಿತಿಯನ್ನು 2008–11ನೇ ಸಾಲಿನಿಂದಲೇ ಪೂರ್ವಾನ್ವಯವಾಗುವಂತೆ ಅನುಮತಿ ನೀಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| | II.12 | 2015–16ನೇ ಸಾಲಿನ ಮೈಸೂರು ವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ. |
| | | ಕುಲಸಚಿವರು ಮಾತನಾಡಿ, ಸಿಎಜಿ ಆಕ್ಷೇಪಣೆಗಳಿಗೆ ಉತ್ತರಗಳನ್ನು ಇತ್ತೀಚೆಗೆ ಕಳುಹಿಸಿಕೊಡಲಾಗಿದೆ. ಸರ್ಕಾರದಿಂದ ಯಾವ ರೀತಿ ಪ್ರತಿಕ್ರಿಯೆ ಬರುತ್ತದೆ ಎಂಬುದನ್ನು ಕಾದುನೋಡಬೇಕಿದೆ ಮತ್ತು ಪ್ರತಿ ವರ್ಷ ಲೆಕ್ಕಪರಿಶೋಧನಾ ಆಕ್ಷೇಪಣೆಗಳು ಪ್ರತಿ ವರ್ಷವೂ ಬರುತ್ತಿದೆ. ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗದವರು ತಮ್ಮ ವಿಭಾಗಗಳಿಗೆ ಬೇಕಾಗುವಂತಹ ವಸ್ತುಗಳನ್ನು ಖರೀದಿಸುವಾಗ ನಿಯಮಾನುಸಾರ ಖರೀದಿಸಿದರೆ ಯಾವ ಆಕ್ಷೇಪಣೆಗಳು ಬರುವುದಿಲ್ಲ. ಆದರೆ ನಿಯಮಗಳ ಉಲ್ಲಂಘನೆಯಿಂದಾಗಿ ಆಡಿಟ್ ಆಕ್ಷೇಪಣೆಗಳು ಹೆಚ್ಚಾಗಿರುವುದರಿಂದ ಪ್ರಸ್ತುತ ವರ್ಷದಿಂದ ಈ ವಿಷಯವಾಗಿ ಕೇಂದ್ರೀಕೃತ ವ್ಯವಸ್ಥೆಯ ಪದ್ಧತಿಯನ್ನು ಅನುಸರಿಸಿ ನಿಗದಿತ ಸಮಯದಲ್ಲಿ ನಿಯಮಾನುಸಾರ ಖರೀದಿಸಲು ಈಗಾಗಲೇ ಸುತ್ತೋಲೆಗಳನ್ನು ಕಳುಹಿಸಲಾಗಿದೆ ಎಂದು ತಿಳಿಸಿದರು. |
| | **ತೀರ್ಮಾನ:** | 2015–16ನೇ ಸಾಲಿನ ಮೈಸೂರು ವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ವಿವಿಧ ವಿಭಾಗಗಳಿಂದ ಉತ್ತರಗಳನ್ನು ಸಂಗ್ರಹಿಸಿ ತಯಾರಿಸಲಾಗಿರುವ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು. |

| | | |
|---|---|---|
| | II.13 | ಮೈಸೂರು ವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಾಪಕರು, ಗ್ರಂಥಪಾಲಕರು ಮತ್ತು ತತ್ಸಮಾನ ವೃಂದದ ಸಿಬ್ಬಂದಿಗಳಿಗೆ ದಿನಾಂಕ 01-01-2016ರ 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ಜಾರಿಗೊಳಿಸುವ ಬಗ್ಗೆ. |
| | ತೀರ್ಮಾನ: | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಾಪಕರು, ಗ್ರಂಥಪಾಲಕರು ಮತ್ತು ತತ್ಸಮಾನ ವೃಂದದ ಸಿಬ್ಬಂದಿಗಳಿಗೆ ದಿನಾಂಕ: 01.01.2016ರ 7ನೇ ಪರಿಷ್ಕೃತ ಯುಜಿಸಿ ವೇತನಶ್ರೇಣಿಯನ್ನು ಜಾರಿಗೊಳಿಸಲು ಹಾಗೂ ಈ ಸಂಬಂಧ ರಾಜ್ಯ ಸರ್ಕಾರವು ಮುಂದಿನ ದಿವಸಗಳಲ್ಲಿ ಪೂರಕ ಆದೇಶಗಳನ್ನು ಹೊರಡಿಸಿದಲ್ಲಿ ಅವುಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಶಿಕ್ಷಣ ಮಂಡಳಿಯ ಸಭೆಯು ಅನುಮೋದಿಸಿತು ಮತ್ತು ಈ ಸಂಬಂಧ ರಚಿಸಲಾದ "Statutes Relating to Direct-Recruitment and Career Advancement Scheme and Miscellaneous provisions to implement the Revised UGC Pay Scales to Teachers, Librarian and equivalent cadre personnel of University of Mysore" ಕರಡು ಅಧಿನಿಯಮವನ್ನು ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿರುವುದನ್ನು ಸಹ ಅನುಸಮರ್ಥಿಸಿತು. |
| | II.14 | 2019-20ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸ್ಥಳ ಬದಲಾವಣೆ ಮಾಡುವ ಬಗ್ಗೆ. |
| | ತೀರ್ಮಾನ: | 2019-20ನೇ ಶೈಕ್ಷಣಿಕ ಸಾಲಿನಲ್ಲಿ ಜೆ.ಎಲ್.ಬಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ಕಾಲೇಜನ್ನು ವಾಲ್ಮೀಕಿ ರಸ್ತೆಯಲ್ಲಿರುವ ಪಡುವಾರಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕಟ್ಟಡಕ್ಕೆ ಸ್ಥಳ ಬದಲಾವಣೆ ಮಾಡುವ ಸಂಬಂಧ ಸ್ಥಳೀಯ ಪರಿಶೀಲನಾ ಸಮಿತಿ ಮಾಡಿರುವ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| | II.15 | 2019-20ನೇ ಶೈಕ್ಷಣಿಕ ಸಾಲಿನಿಂದ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ಸ್ಥಳ ಹಾಗೂ ಹೆಸರು ಬದಲಾವಣೆ ಮಾಡುವ ಬಗ್ಗೆ. |
| | ತೀರ್ಮಾನ: | ಗೀತಾ ಶಿಶು ಶಿಕ್ಷಣ ಸಂಸ್ಥೆ, ಮೈಸೂರು ಇವರು 2019-20ನೇ ಶೈಕ್ಷಣಿಕ ಸಾಲಿನಿಂದ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜನ್ನು # 45-46, ಕೆ.ಆರ್.ಎಸ್ ರಸ್ತೆ, ಮೇಟಗಳ್ಳಿ ಕೈಗಾರಿಕಾ ಪ್ರದೇಶ ಇಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕಟ್ಟಡಕ್ಕೆ ಸ್ಥಳ ಬದಲಾವಣೆ ಮಾಡಿ "ಜಿ.ಎಸ್.ಎಸ್.ಎಸ್" (ಜಿ.ಎಸ್.ಎಸ್.ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು) ಎಂದು ಪೂರ್ವನಾಮ ಸೇರಿಸಲು ಸ್ಥಳೀಯ ಪರಿಶೀಲನಾ ಸಮಿತಿ ಭೇಟಿ ನೀಡಿ ಶಿಫಾರಸ್ಸು ಮಾಡಿರುವ ವರದಿಯನ್ನು ಸಭೆಯು ಅನುಮೋದಿಸಿತು. |
| | II.16 | 2017-18 ರಿಂದ 2019-20ನೇ ಶೈಕ್ಷಣಿಕ ಸಾಲಿನವರೆಗೆ ಮಾಂಡವ್ಯ ಪ್ರಥಮ ದರ್ಜೆ ಕಾಲೇಜಿಗೆ ಶಾಶ್ವತ ಸಂಯೋಜನೆಯನ್ನು ಮುಂದುವರೆಸಲು ಸ್ಥಳೀಯ ಸಮಿತಿಯು ಸಲ್ಲಿಸಿರುವ ವರದಿ. |
| | ತೀರ್ಮಾನ: | ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ತಮ್ಮ ಪತ್ರದಲ್ಲಿ ಸಂಖ್ಯೆ: ಇಡಿ33 ಯುಎಂವಿ 2018 ದಿನಾಂಕ: 29.11.2018ರ ಆದೇಶದನ್ವಯ ಮಾಂಡವ್ಯ ಪ್ರಥಮ ದರ್ಜೆ ಕಾಲೇಜಿಗೆ ಶಾಶ್ವತ ಸಂಯೋಜನೆಯನ್ನು ಮುಂದುವರೆಸಲು ಸಭೆಯು ತೀರ್ಮಾನಿಸಿತು. |

| | | |
|---|---|---|
| | II.17 | 2019–20ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜು, ಚಿನಕುರಳಿ, ಪಾಂಡವಪುರ ಇವರು ಬಿ.ಎ. ಬಿಎಸ್ಸಿ, ಬಿ.ಬಿ.ಎ. ಕೋರ್ಸುಗಳನ್ನು ಪ್ರಾರಂಭಿಸಲು ಕೋರಿರುವುದರಿಂದ ಸ್ಥಳೀಯ ವಿಚಾರಣಾ ಸಮಿತಿಯು ಸಂಯೋಜನೆ ಮಂಜೂರಾತಿಗಾಗಿ ಸಲ್ಲಿಸಿರುವ ವರದಿ. |
| | ತೀರ್ಮಾನ: | 2019–20ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜು, ಚಿನಕುರಳಿ, ಪಾಂಡವಪುರ ಇವರು ಬಿ.ಎ. ಬಿಎಸ್ಸಿ, ಬಿ.ಬಿ.ಎ. ಕೋರ್ಸುಗಳನ್ನು ಪ್ರಾರಂಭಿಸುವ ಬಗೆಗೆ ಸಂಯೋಜನೆ ಮಂಜೂರಾತಿಗಾಗಿ ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯ ಶಿಫಾರಸ್ಸನ್ನು ಒಪ್ಪಲಾಯಿತು. |
| | II.18 | ಹಣಕಾಸು ಸಮಿತಿಗೆ ಒಬ್ಬರು ಶಿಕ್ಷಣ ಮಂಡಳಿಯ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ವಿಷಯವನ್ನು ಅನುಸಮರ್ಥನೆ ಬಗ್ಗೆ. |
| | ತೀರ್ಮಾನ: | ಪ್ರೊ. ಆಯಿಷಾ ಎಂ.ಶರೀಫ್ ಇವರ ಸದಸ್ಯತ್ವವು ಅಂತ್ಯವಾದ್ದರಿಂದ ಅವರಿಂದ ತೆರವಾದ ಸ್ಥಾನಕ್ಕೆ ಪ್ರೊ. ಡಿ. ಆನಂದ, ಡೀನರು ಅವರನ್ನು ಶಿಕ್ಷಣ ಮಂಡಳಿಯ ಸದಸ್ಯರನ್ನಾಗಿ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 32(1)(vi)ರ ಪ್ರಕಾರ ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| | II.19 | CSR-Centre of Excellence at the premises of Gopalaswamy Institution, Mysore ಸಂಸ್ಥೆಯಲ್ಲಿ Specialized Program ಅಡಿಯಲ್ಲಿ ನಡೆಸಲಾಗುತ್ತಿರುವ MBA(CSR) ಕೋರ್ಸನ್ನು ಸ್ಥಗಿತಗೊಳಿಸುವ ಬಗ್ಗೆ. |
| | ತೀರ್ಮಾನ: | 2018–19ನೇ ಸಾಲಿಗೆ ಯಾವುದೇ ಪ್ರವೇಶಾತಿ ಇಲ್ಲದೇ ಇರುವುದರಿಂದ MBA(CSR) ಕೋರ್ಸನ್ನು ಸ್ಥಗಿತಗೊಳಿಸಲಾಗಿರುವ ವಿಷಯವನ್ನು ಒಪ್ಪಲಾಯಿತು. |
| | II.20 | ಮೈಸೂರು ವಿಶ್ವವಿದ್ಯಾನಿಲಯದ ಕರಡು ಪಿಂಚಣಿ ಅಧಿನಿಯಮ–1979ಕ್ಕೆ ತಿದ್ದುಪಡಿ ಮಾಡುವ ಬಗ್ಗೆ. |
| | ತೀರ್ಮಾನ: | ರಾಜ್ಯ ಸರ್ಕಾರದ ನೂತನ ಪಿಂಚಣಿ ಯೋಜನೆ ಅನ್ವಯ ಮೈಸೂರು ವಿಶ್ವವಿದ್ಯಾನಿಲಯವು ದಿನಾಂಕ: 01.04.2006ರ ನಂತರ ವಿಶ್ವವಿದ್ಯಾನಿಲಯದ ಸೇವೆಗೆ ಸೇರ್ಪಡೆಗೊಳ್ಳುವ ಉದ್ಯೋಗಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಸಂಬಂಧ Amendment of Mysore University Pension Statues-1979(Framed Under Section 40 of the Karnataka State Universities Act 2000) ಪರಿಷ್ಕೃತ ಕರಡು ಪಿಂಚಣಿ ಅಧಿನಿಯವನ್ನು ರಚಿಸಿದ್ದು. ಸದರಿ ಕರಡು ಪಿಂಚಣಿ ಅಧಿನಿಯಮವನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತವನ್ನು ದೊರಕಿಸಿಕೊಡುವಂತೆ ಕೋರಿ ಸರ್ಕಾರಕ್ಕೆ ಕಳುಹಿಸುವ ಪ್ರಸ್ತಾವನೆಗೆ ಶಿಕ್ಷಣ ಮಂಡಳಿ ಸಭೆಯು ಒಪ್ಪಿ ಅನುಮೋದಿಸಿತು. |
| | II.21 | 2019–20ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಹೊಳೆನರಸೀಪುರ ತಾಲ್ಲೂಕು, ಹರದನಹಳ್ಳಿಯಲ್ಲಿ ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ ಬಿ.ಎ, ಬಿ.ಎಸ್ಸಿ, ಬಿ.ಸಿ.ಎ, ಬಿ.ಕಾಂ, ಮತ್ತು ಬಿಬಿಎ ಕೋರ್ಸುಗಳನ್ನು ಪ್ರಾರಂಭಿಸಲು ಸ್ಥಳೀಯ ವಿಚಾರಣ ಸಮಿತಿಯು ಸಂಯೋಜನೆ ಮಂಜೂರಾತಿಗಾಗಿ ಸಲ್ಲಿಸಿರುವ ವರದಿ |
| | ತೀರ್ಮಾನ: | 2019–20ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಹೊಳೆನರಸೀಪುರ ತಾಲ್ಲೂಕು, ಹರದನಹಳ್ಳಿಯಲ್ಲಿ ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ ಬಿ.ಎ, ಬಿ.ಎಸ್ಸಿ, ಬಿ.ಸಿ.ಎ, ಬಿ.ಕಾಂ, ಮತ್ತು ಬಿಬಿಎ ಕೋರ್ಸುಗಳನ್ನು ಪ್ರಾರಂಭಿಸಲು ಸ್ಥಳೀಯ ವಿಚಾರಣ ಸಮಿತಿಯು ಸಲ್ಲಿಸಿರುವ ವರದಿಯ ಶಿಫಾರಸ್ಸನ್ನು ಸಭೆಯಲ್ಲಿ ಒಪ್ಪಲಾಯಿತು. |

| | | |
|---|---|---|
| | II.22 | ಪ್ರಾಂಶುಪಾಲರು, ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇವರು 2019–20ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಎಂ.ಎ – ಕನ್ನಡ ಮತ್ತು ಎಂ.ಎ – ರಾಜ್ಯಶಾಸ್ತ್ರ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಸ್ಥಳೀಯ ವಿಚಾರಣಾ ಸಮಿತಿಯು ಸಂಯೋಜನೆ ಮಂಜೂರಾತಿಗಾಗಿ ಸಲ್ಲಿಸಿರುವ ವರದಿ. |
| | ತೀರ್ಮಾನ: | ಪ್ರಾಂಶುಪಾಲರು, ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇವರು 2019–20ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಎಂ.ಎ – ಕನ್ನಡ ಮತ್ತು ಎಂ.ಎ – ರಾಜ್ಯಶಾಸ್ತ್ರ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯ ಶಿಫಾರಸ್ಸನ್ನು ಸಭೆಯಲ್ಲಿ ಒಪ್ಪಲಾಯಿತು. |
| | II.23 | 2018–19ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳು. |
| | ತೀರ್ಮಾನ: | 2018–19ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಸಭೆಯು ಅನುಮೋದಿಸಿತು. |
| | II.24 | ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಚಾಮರಾಜನಗರದಲ್ಲಿ ಸ್ಥಾಪಿಸಲಾಗಿರುವ ಸ್ನಾತಕೋತ್ತರ ಕೇಂದ್ರದ ಪರಿಷ್ಕೃತ ಅಧಿನಿಯಮವನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ. |
| | ತೀರ್ಮಾನ: | ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಚಾಮರಾಜನಗರದಲ್ಲಿ ಸ್ಥಾಪಿಸಲಾಗಿರುವ ಸ್ನಾತಕೋತ್ತರ ಕೇಂದ್ರದ ಪರಿಷ್ಕೃತ ಕರಡು ಅಧಿನಿಯಮಕ್ಕೆ ಸನ್ಮಾನ್ಯ ಕುಲಾಧಿಪತಿಗಳ ಅಂಕಿತ ದೊರಕಿಸಿಕೊಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಅನುಮೋದನೆ ನೀಡಿತು. |
| | II.25 | 2019–20ನೇ ಶೈಕ್ಷಣಿಕ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ Yogic Science ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸುವ ಬಗ್ಗೆ. |
| | ತೀರ್ಮಾನ: | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2019–20ನೇ ಸಾಲಿನಲ್ಲಿ Yogic Science ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸುವ ಸಂಬಂಧ ರಚಿಸಲಾಗಿದ್ದ ಸಮಿತಿಯು ಸಲ್ಲಿಸಿರುವ ನಡವಳಿಯ ಶಿಫಾರಸ್ಸುಗಳನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| | II.26 | 2019–20ನೇ ಶೈಕ್ಷಣಿಕ ಸಾಲಿಗೆ ಪದವಿ ತರಗತಿಗಳಿಗೆ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಷಯವನ್ನು ಪೂರಕ ಪಠ್ಯ ವಿಷಯವನ್ನಾಗಿ (Subsidiary course) ಸೇರ್ಪಡಿಸುವ ಬಗ್ಗೆ. |
| | ತೀರ್ಮಾನ: | 2019–20ನೇ ಶೈಕ್ಷಣಿಕ ಸಾಲಿಗೆ ಪದವಿ ತರಗತಿಗಳಿಗೆ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಷಯವನ್ನು ಪೂರಕ ಪಠ್ಯ ವಿಷಯವನ್ನಾಗಿ (Subsidiary course) ಸೇರ್ಪಡಿಸುವ ಸಂಬಂಧ ವಿದ್ಯಾರ್ಥಿಗಳ ಆರೋಗ್ಯ, ಕ್ರೀಡೆ ಸಂಬಂಧಿಸಿದಂತೆ ದೈಹಿಕವಾಗಿ ಚಿಂತಿಸುವಂತಹ ವಿಷಯವಾಗಿರುವುದರಿಂದ ಒಂದು ಸಮಿತಿಯನ್ನು ಮಾಡಿ ಅದರ ವರದಿಯನ್ನು CBCS ಸಮಿತಿ, ಸಂಬಂಧಿಸಿದ ಬಿ.ಓ.ಎಸ್ ಮತ್ತು ನಿಕಾಯಗಳ ಮುಂದೆ ಚರ್ಚೆಗೆ ಮಂಡಿಸಿ ಅದರ ತೀರ್ಮಾನದಂತೆ ಮುಂದುವರೆಯಬೇಕೆಂಬ ಅಭಿಪ್ರಾಯದೊಂದಿಗೆ ವಿಷಯವನ್ನು ಮುಂದೂಡಲಾಯಿತು. |

| | | |
|---|---|---|
| | ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳು ಮಂಡಿಸಿದ ವಿಷಯಗಳು | |
| III | III.1 | ದಿನಾಂಕ 05-04-2019ರಂದು ನಡೆದ ಕಲಾ ನಿಕಾಯ ಸಭೆಯ ನಡವಳಿ ಅನುಮೋದನೆ ಬಗ್ಗೆ. |
| | ತೀರ್ಮಾನ: | ಇಂಗ್ಲಿಷ್ ಅಧ್ಯಯನ ಮಂಡಳಿಯು ನೀಡಿರುವ Functional English ಪಠ್ಯಕ್ರಮವನ್ನೊಳಗೊಂಡಂತೆ ಕಲಾ ನಿಕಾಯ ಸಭೆಯ ನಡವಳಿಯನ್ನು ಅನುಮೋದಿಸಲಾಯಿತು. |
| | III.2 | ದಿನಾಂಕ 01-04-2019ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ನಡವಳಿಯ ತೀರ್ಮಾನದ ಅನುಮೋದನೆಗಾಗಿ. |
| | | ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯಗಳನ್ನು ಪ್ರಾರಂಭಿಸಲು ಸರ್ಕಾರದಿಂದ ಅನುಮತಿ ಕೋರಲಾಗಿರುವ ವಿಷಯವನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |
| | ತೀರ್ಮಾನ: | ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ನಡವಳಿಯಲ್ಲಿನ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು. |
| | III.3 | ದಿನಾಂಕ 03-04-2019ರಂದು ನಡೆದ ವಾಣಿಜ್ಯ ನಿಕಾಯ ಸಭೆಯ ನಡವಳಿ ಅನುಮೋದನೆ ಬಗ್ಗೆ. |
| | ತೀರ್ಮಾನ: | ವಾಣಿಜ್ಯ ನಿಕಾಯ ಸಭೆಯ ನಡವಳಿಯನ್ನು ಅನುಮೋದಿಸಲಾಯಿತು. |
| | III.4 | ದಿನಾಂಕ 04-04-2019ರಂದು ನಡದ ಶಿಕ್ಷಣ ನಿಕಾಯ ಸಭೆಯ ನಡವಳಿ ಅನುಮೋದನೆ ಬಗ್ಗೆ. |
| | ತೀರ್ಮಾನ: | ಶಿಕ್ಷಣ ನಿಕಾಯ ಸಭೆಯ ನಡವಳಿಯನ್ನು ಅನುಮೋದಿಸಲಾಯಿತು. |
| | III.5 | ದಿನಾಂಕ 04-04-2019ರಂದು ನಡೆದ ಕಾನೂನು ನಿಕಾಯ ಸಭೆಯ ನಡವಳಿ ಅನುಮೋದನೆ ಬಗ್ಗೆ. |
| | ತೀರ್ಮಾನ: | ಕಾನೂನು ನಿಕಾಯ ಸಭೆಯ ನಡವಳಿಯನ್ನು ಅನುಮೋದಿಸಲಾಯಿತು. |
| IV | ಶಿಕ್ಷಣ ಮಂಡಳಿ ಸದಸ್ಯರು ಮಂಡಿಸಿದ ನಿರ್ಣಯಗಳು | |
| | IV.1 | ಬಿ.ಇಡಿ ಕೋರ್ಸಿಗೆ ಅಂತಿಮ ವರ್ಷದಲ್ಲಿ ನೀಡಲಾಗುವ ಸಮಗ್ರ ಅಂಕಪಟ್ಟಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅಂಕಗಳು ಮತ್ತು ಶೇಕಡವಾರು ಅಂಕಗಳನ್ನು ನಮೂದಿಸುವ ಬಗ್ಗೆ. |
| | ತೀರ್ಮಾನ: | ಒಪ್ಪಲಾಯಿತು. |

**ಇತರೆ ವಿಷಯಗಳು:**

1. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಆರು ತಿಂಗಳೊಳಗೆ ಭರ್ತಿ ಮಾಡಲು ಯುಜಿಸಿಯಿಂದ ಪತ್ರ ಬಂದಿರುತ್ತದೆ ಹಾಗೂ ಸರ್ಕಾರದಿಂದ ಬಂದಿರುವ ಆದೇಶಾನುಸಾರ ಹೈದ್ರಾಬಾದ್ ಕರ್ನಾಟಕ ಮತ್ತು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. 06 ತಿಂಗಳೊಳಗೆ ಭರ್ತಿಮಾಡದಿದ್ದರೆ ಯುಜಿಸಿಯಿಂದ ಬರುವ ಅನುದಾನವು ನಿಂತುಹೋಗುವ ಸಾಧ್ಯತೆಗಳಿರುವುದರಿಂದ ಮುಂದಿನ 6 ತಿಂಗಳಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಪ್ರಯತ್ನಿಸಲಾಗುತ್ತಿದೆ. 2020ನೇ ಇಸವಿಯಲ್ಲಿ ನ್ಯಾಕ್ ಕಮಿಟಿ ಬರಲಿದ್ದು ಉತ್ತಮ ಶ್ರೇಣಿ ಲಭಿಸಬೇಕಾದರೆ ಖಾಲಿಯಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕಾಗುತ್ತದೆ ಎಂದು ಮಾನ್ಯ ಕುಲಪತಿಯವರು ತಿಳಿಸಿದರು.

2. ಕುಲಸಚಿವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ UGC MOOC's SWAYAM ಆನ್ ಲೈನ್ ಶಿಕ್ಷಣ ವ್ಯವಸ್ಥೆಯಾಗಿದ್ದು, ಇದನ್ನು ಉನ್ನತ ಶಿಕ್ಷಣದಲ್ಲಿ ಪ್ರಚಾರಪಡಿಸುವಂತೆ ಈಗಾಗಲೇ ತಿಳಿಸಲಾಗಿದೆ. ಸುಮಾರು ಒಟ್ಟು 43 ಆನ್‌ಲೈನ್ ಕೋರ್ಸುಗಳನ್ನು UGC MOOC's SWAYAM ಅಭಿವೃದ್ಧಿಪಡಿಸಿದ್ದು ಅದರಲ್ಲಿ ಈ ವರ್ಷಕ್ಕೆ 43 ಕೋರ್ಸ್‌ಗಳು ಉನ್ನತ ಶಿಕ್ಷಣಕ್ಕೆ ಲಭ್ಯಪಡಿಸಲಾಗಿದೆ. ಇತ್ತೀಚಿಗೆ 2016–17ರಲ್ಲಿ SWAYAM MOOC ಆನ್ ಲೈನ್ ಕೋರ್ಸ್‌ನ್ನು ಕೆಲವು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು 20% ಕ್ರೆಡಿಟ್‌ಗಳಿಗೆ ಆನ್‌ಲೈನ್ ಮೂಲಕ ತೆಗೆದುಕೊಳ್ಳಲು ಅವಕಾಶವಿದೆ. ಈ ಪರೀಕ್ಷೆಗಳು Online ಮೂಲಕ National Testing Agency ಮತ್ತು UGC-NET Bureau ವತಿಯಿಂದ ನಡೆಸಲಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯ UGC MOOC's SWAYAM ಅನ್ನು ಅಳವಡಿಸಿಕೊಂಡು ಜಾರಿಯಲ್ಲಿ ತಂದಿರುವ ಕರ್ನಾಟಕದ ಮೊದಲ ವಿಶ್ವವಿದ್ಯಾನಿಲಯವಾಗಿರುತ್ತದೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷೆ ನಡೆಸಲು ನೋಡಲ್ ಸೆಂಟರ್ ಆಗಿ ಗುರುತಿಸಲಾಗಿದೆ. ಕಳೆದ ಸಾಲಿನಲ್ಲಿ ವಿದ್ಯಾರ್ಥಿಗಳ ನೊಂದಣಿ ಕಡಿಮೆಯಾಗಿದ್ದು ಈ ಸಭೆಯ ಮೂಲಕ ಶೈಕ್ಷಣಿಕ ಮುಖ್ಯಸ್ಥರು ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು ಎಂದು ತಿಳಿಸಿದರು. Job Oriented Courseಅನ್ನು Online ಮೂಲಕ ಅಂಗ ಸಂಸ್ಥೆಗಳಾದ ಸ್ನಾತಕೋತ್ತರ ಕಾಲೇಜಿನವರು UGC MOOC's SWAYAM ಆನ್‌ಲೈನ್ ಕೋರ್ಸ್‌ನ್ನು ಈ ವರ್ಷದಿಂದ ಪ್ರಾರಂಭಿಸಬೇಕು ಮತ್ತು ಅಳವಡಿಸಿಕೊಳ್ಳಬೇಕು ಇದಕ್ಕೆ ಸಂಬಂಧಿಸಿದಂತೆ ನೋಡೆಲ್ ಅಧಿಕಾರಿಯನ್ನು ಆಯಾ ಕಾಲೇಜುಗಳಲ್ಲಿ ನೇಮಿಸಲಾಗುವುದು. UGC MOOC's SWAYAM ದೇಶೀಯವಾಗಿ ಅಭಿವೃದ್ಧಿಪಡಿಸಿದ UGC Online ಕೋರ್ಸ್‌ಗಳಾಗಿದ್ದು 2017ರಲ್ಲಿ ಆರಂಭವಾಯಿತು. ಇದಕ್ಕೆ ಹೆಚ್ಚು ಗಮನ ನೀಡಿ ವಿ.ವಿ.ಯಲ್ಲಿ Online ಶಿಕ್ಷಣವನ್ನು ಬಲಪಡಿಸಬೇಕು ಹಾಗೂ ಇಎಂಎಂಆರ್‌ಸಿ ಸಹಕಾರದಿಂದ ಸ್ವಯಂ ಕೋರ್ಸ್‌ನ e-contentಅನ್ನು ತಯಾರಿಸಬೇಕೆಂದು ಸಭೆಗೆ ತಿಳಿಸಿದರು.

3. ಪ್ರೊ. ಶಿವಬಸವಯ್ಯ, ನಿರ್ದೇಶಕರು, ಡಾ. ಬಿ.ಆರ್.ಅಂಬೇಡ್ಕರ್ ಪಿ.ಜಿ ಸೆಂಟರ್, ಚಾಮರಾಜನಗರ ಇವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಪಡೆಯಲು ಸಾಮಾನ್ಯ ವಿದ್ಯಾರ್ಥಿಗಳಿಗೆ ಕನಿಷ್ಠ 50 ಅಂಕಗಳು ಹಾಗೂ ಎಸ್ಸಿ/ಎಸ್ಟಿ ವಿದ್ಯಾರ್ಥಿಗಳಿಗೆ ಕನಿಷ್ಠ 45 ಅಂಕಗಳ ಮಾನದಂಡವನ್ನು ನಿಗದಿಪಡಿಸಲಾಗಿದೆ. ಆದರೆ ಸ್ನಾತಕೋತ್ತರ ಪದವಿಯ ಇಂಗ್ಲಿಷ್ ಅಧ್ಯಯನಕ್ಕೆ ಮಾತ್ರ ಸಾಮಾನ್ಯ ವಿದ್ಯಾರ್ಥಿಗಳಿಗೆ 50 ಅಂಕಗಳು ಹಾಗೂ ಎಸ್ಸಿ/ಎಸ್ಟಿ ವಿದ್ಯಾರ್ಥಿಗಳು 45 ಅಂಕಗಳ ಮಾನದಂಡವನ್ನು ನಿಗದಿಪಡಿಸಿರುವುದು ಉನ್ನತ ವ್ಯಾಸಂಗಕ್ಕಾಗಿ ಪ್ರವೇಶ ಬಯಸುವ ಗ್ರಾಮೀಣಾ ಪ್ರದೇಶದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಸ್ನಾತಕೋತ್ತರ ಪದವಿಯ ಇಂಗ್ಲಿಷ್ ಅಧ್ಯಯನಕ್ಕೂ ಸಾಮಾನ್ಯ ವಿದ್ಯಾರ್ಥಿಗಳಿಗೆ 45 ಅಂಕಗಳು ಹಾಗೂ ಎಸ್ಸಿ/ಎಸ್ಟಿ ವಿದ್ಯಾರ್ಥಿಗಳು 40 ಅಂಕಗಳನ್ನು ನಿಗದಿಪಡಿಸಬೇಕೆಂದು ಕೋರಿದರು.

ಪ್ರೊ. ಮಹದೇವ್, ಕಲಾ ನಿಕಾಯದ ಡೀನರು ಮಾತನಾಡಿ ಪ್ರೊ. ಶಿವಬಸವಯ್ಯ ಅವರು ಮಂಡಿಸಿದ ವಿಷಯವನ್ನು ಒಪ್ಪದೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸ್ನಾತಕೋತ್ತರ ಇಂಗ್ಲಿಷ್ ಪದವಿ ಕೋರ್ಸ್‌ನ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ಕೆಲವು ಇತರೆ ಕೋರ್ಸುಗಳಿಗಿರುವಂತೆ ನಿಯಮವನ್ನು ಅಳವಡಿಸಿಕೊಂಡಿರುವ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮವನ್ನು ಮುಂದುವರೆಸುವುದು ಸೂಕ್ತವೆಂದು ತಿಳಿಸಿದರು.

ಶ್ರೀಯುತ ಅಪ್ಪಾಜಿಗೌಡರು ಮಾತನಾಡಿ, ಶೈಕ್ಷಣಿಕ ಅವಕಾಶಗಳನ್ನು ಹಿಂದುಳಿದ ಪ್ರದೇಶವಾದ ಚಾಮರಾಜನಗರ ಜಿಲ್ಲಾ ಹಾಗೂ ಸುತ್ತಮುತ್ತಲಿನ ಪ್ರದೇಶದ ವಿದ್ಯಾರ್ಥಿಗಳಿಗೆ ಕಲ್ಪಿಸುವ ದೃಷ್ಟಿಯಿಂದ ಪ್ರಸ್ತುತ ವಿಷಯ ಮುಖ್ಯವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಮಾನ್ಯ ಕುಲಪತಿಯವರು ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರಕ್ಕೆ ವ್ಯಾಸಂಗ ಮಾಡಲು ಬರುವ ಆ ಜಿಲ್ಲೆಯ ವ್ಯಾಪ್ತಿಯಲ್ಲಿ ಬಿ.ಎ. ಪದವಿಯಲ್ಲಿ ಐಚ್ಛಿಕ ವಿಷಯವನ್ನಾಗಿ ಇಂಗ್ಲಿಷ್ ಬೋಧಿಸುವ ಕಾಲೇಜುಗಳು ಹಾಗೂ ಅಂತಹ ಕಾಲೇಜುಗಳಲ್ಲಿನ ಫಲಿತಾಂಶ ಇತ್ಯಾದಿ ಅಂಶಗಳನ್ನು ಪರಿಶೀಲಿಸಿ ಎಂ.ಎ. ಇಂಗ್ಲಿಷ್ ಅಧ್ಯಯನ ಪ್ರವೇಶಕ್ಕೆ ಅರ್ಹತಾ ಅಂಕಗಳನ್ನು ಪುನರ್ ನಿಗಧಿಪಡಿಸುವ ಬಗ್ಗೆ ಒಂದು ವಾರದೊಳಗಾಗಿ ವರದಿಯನ್ನು ಸಲ್ಲಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಿ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

**ತೀರ್ಮಾನ:** ಎಂ.ಎ. ಇಂಗ್ಲಿಷ್ ಅಧ್ಯಯನ ಪ್ರವೇಶಕ್ಕೆ ಅರ್ಹತಾ ಅಂಕಗಳನ್ನು ಪುನರ್ ನಿಗಧಿಪಡಿಸುವ ಸಂಬಂಧ ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಹಾಗೂ 2019–20ನೇ ಸಾಲಿನ ಪ್ರವೇಶಾತಿಗೆ ಅವಕಾಶ ಕಲ್ಪಿಸುವ ಸಾಧ್ಯ–ಅಸಾಧ್ಯತೆಗಳ ಬಗ್ಗೆ ಪರಿಶೀಲಿಸಿ ಕೂಲಂಕಷ ವರದಿಯನ್ನು ಒಂದು ವಾರದೊಳಗೆ ಸಲ್ಲಿಸಬೇಕೆಂದು ಸೂಚಿಸಲು ತೀರ್ಮಾನಿಸಲಾಯಿತು.

ಮಾನ್ಯ ಕುಲಪತಿಗಳು ವಂದಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| ಸಹಿ/– | ಸಹಿ/– |
|---|---|
| **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** | **ಕುಲಪತಿಗಳು ಹಾಗೂ ಅಧ್ಯಕ್ಷರು** |

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/740/2018-19

ದಿನಾಂಕ 26-07-2019

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

## ಸೇರ್ಪಡೆ

ವಿಷಯ: ದಿನಾಂಕ: 07-06-2019ರಂದು ನಡೆದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ನಡವಳಿಯ ಇತರೆ ವಿಷಯಗಳಲ್ಲಿ ಕ್ರಮ ಸಂಖ್ಯೆ: 4 ಅನ್ನು ಸೇರ್ಪಡೆ ಬಗ್ಗೆ.

ಉಲ್ಲೇಖ: ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 08-07-2019

* * * * *

ದಿನಾಂಕ 07-06-2019ರಂದು ಬೆಳಿಗ್ಗೆ 11-00 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯ ಇತರೆ ವಿಷಯಗಳಲ್ಲಿ ಕ್ರಮ ಸಂಖ್ಯೆ 4ರಲ್ಲಿ **"ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಎಂ.ಬಿ.ಎ ವಿಭಾಗದಲ್ಲಿ 2019-20ನೇ ಸಾಲಿನಿಂದ ಎಂ.ಬಿ.ಎ (TTM- Tourism and Travel Management) ಕೋರ್ಸ್‌ಅನ್ನು ಪ್ರಾರಂಭಿಸಲು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು"** ಎಂಬ ಅಂಶವನ್ನು ಸೇರ್ಪಡೆ ಮಾಡಿಕೊಂಡು ನಡವಳಿಯನ್ನು ಓದಿಕೊಳ್ಳುವುದು.

ತಮ್ಮ ನಂಬುಗೆಯ,

ಕುಲಸಚಿವ

ಪ್ರತಿ:

1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
5. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.

AC Forwarding letter